ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 4, Jan-Feb, 2023, Pp. 53-56.**
**©*IIMRD*, Mysuru**

IIMRD JOURNALS

**www.iimrd.com**

# ದಾಸೋಹ ಮತ್ತು ಕಾಯಕ ಸಿದ್ಧಾಂತ

**ಶಿವಯೋಗೆಪ್ಪ ಬಿರಾದಾರ***

*ಸಂಶೋಧಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

***ಸಾರಾಂಶ: (Abstract)***

*ಹನ್ನೆರಡನೆಯ ಶತಮಾನವು ಸ್ಮರಣಿಯ ಶತಮಾನ, ಪ್ರಪಂಚದಲ್ಲಿಯೇ ನಡೆದ ಮೊದಲ ಸಾಮಾಜಿಕ ಚಳುವಳಿ ಈ ಶತಮಾನದಲ್ಲಿ ನಡೆದಿದೆ. ಈ ಚಳುವಳಿಯ ಮೂಲ ಉದ್ದೇಶ ಸಾಮಾಜಿಕ ದೋಷಗಳನ್ನು ಕಂಡು ಹಿಡಿದು ಆ ದೋಷಗಳ ನಿವಾರಣೆಗಾಗಿ ಪ್ರಯತ್ನಿಸುವುದಾಗಿದೆ. ಅಂದಿನ ಸಮಾಜ ಎದುರಿಸುತ್ತಿದ್ದ ಸಮಸ್ಯೆಗಳನ್ನು ಕಂಡು ಹಿಡಿದು ಅವುಗಳಿಗೆ ನಿಜವಾದ ಅರ್ಥವನ್ನು ಕಲ್ಪಿಸುವ ಕಾರ್ಯದಲ್ಲಿ ಶರಣರು ತೊಡಗಿದರು. ಅವುಗಳಲ್ಲಿ ಮುಖ್ಯವಾಗಿ ದಾಖಲಿಸುವ ಅಂಶಗಳೆಂದರೆ ಲಿಂಗಾಯತ ಸಂಸ್ಕೃತಿಯ ಒಳನೋಟಗಳನ್ನು ಬಿಚ್ಚಿಡುವುದಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಲೇಖನದಲ್ಲಿ ದಾಸೋಹ ಮತ್ತು ಕಾಯಕ ಸಿದ್ಧಾಂತಗಳ ಬಗ್ಗೆ ವಿವರಿಸಲಾಗಿದೆ. ದಾಸೋಹ ಮತ್ತು ಕಾಯಕ ಪ್ರೇಮಿಗಳಾದ ಶರಣರು 'ಕಾಯಕವೇ ಕೈಲಾಸ' ಎಂಬ ಸೂತ್ರ ಹಿಡಿದು. ಈ ಎರಡು ತತ್ವ ಸಿದ್ಧಾಂತಗಳ ಮಹತ್ವವನ್ನರಿತು ಆಚರಿಸುತ್ತಿದ್ದರು.*

***ಮುಖ್ಯ ಪದಗಳು: (Keywords)*** *ಬಸವಣ್ಣ, ಶಿವಶರಣರು, ವಚನಗಳು, ದಾಸೋಹ, ಕಾಯಕ, ಸಿದ್ಧಾಂತ.*

**ಪೀಠಿಕೆ**

ಜಗತ್ತಿನ ಸಕಲ ಜೀವ ಜಂತುಗಳಿಗೆಲ್ಲ ಅವುಗಳ ಪ್ರಾಣ ರಕ್ಷಣೆಗೆ ಆಹಾರವೇ ಪ್ರಮುಖವಾಗಿದೆ. ಪ್ರತಿಯೊಂದು ಜೀವಿಯೂ ಬದುಕಿನುದ್ದಕ್ಕೂ ಈ ಆಹಾರ ದೊರಕಿಸುವಲ್ಲಿಯೇ ಹಗಲಿರುಳು ಶ್ರಮಿಸುತ್ತವೆ. ಮನುಷ್ಯ ಪ್ರಾಣಿಯೂ ಹೊರತಾಗಿಲ್ಲ. ಮನುಷ್ಯ ಬದುಕಿರುವುದಕ್ಕೆ ಆಹಾರ ಬೇಕು. ಆದರೆ ಬದುಕೇ ಆಹಾರ ಸೇವನೆಯ ಗುರಿಯಾಗಬಾರದೆಂದು ನಮ್ಮ ಶರಣರು ಗುರುತಿಸಿದರು. ಅದಕ್ಕಾಗಿಯೇ ತಮಗೆ ದೊರೆತ ಕಾಯಕ ಮಾಡಿದರು. ಆಹಾರದಿಂದಲೇ ಮನಸ್ಸು, ಬುದ್ಧಿ, ಚಿತ್ತ, ಶ್ರದ್ಧೆಗಳೆಂಬ ಈ ವಿಭಾಗಗಳು ಬೆಳವಣಿಗೆಗೆ ಎಂಥ ಆಹಾರಬೇಕು? ಯಾವ ಆಹಾರದಿಂದ ಮನಸ್ಸು ಸತ್ಯ ಶುದ್ಧವಾಗಿರುತ್ತದೆ ಎಂಬುದನ್ನು ಅರಿತ ಶರಣರು ಶುದ್ಧ ಆಹಾರಕ್ಕೆ ಪ್ರಸಾದವೆಂದು ಕರೆದರು. ಅಂತಹ ಶುದ್ಧವಾದ ಆಹಾರ ಸಂಪಾದನೆಗೆ ಪ್ರಾಮಾಣಿಕ ಪ್ರಯತ್ನ ಹಾಗೂ ಶ್ರದ್ಧಾಚರಣೆಗೆ ಪ್ರಮುಖ ಸ್ಥಾನವನ್ನು ಕೊಟ್ಟಿದ್ದಾರೆ. ಮನುಷ್ಯ ತನ್ನ ಉದ್ದಾರಕ್ಕಾಗಿ ರಸರುಚಿಗಾಗಿ ತಿನ್ನುವದು ಕೂಳಾದರೆ ಶಕ್ತಿಯಾಗಿ ಶುಚಿಯಾಗಿ ಊಟ ಮಾಡುವದು ಪ್ರಸಾದ ಮಹಾ ಪ್ರಸಾದವೆನಿಸುತ್ತದೆ.

*Please cite this article as: ಶಿವಯೋಗೆಪ್ಪ ಬಿರಾದಾರ.* (2023). ದಾಸೋಹ ಮತ್ತು ಕಾಯಕ ಸಿದ್ಧಾಂತ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ. 4(4). ಪು. ಸಂ. 53–.*

ಶರಣರ ವಿಚಾರಗಳು ಸಮಕಾಲೀನ ಸಮಾಜದ ಸಂದರ್ಭದಲ್ಲಿ ಹೇಗೆ ಪ್ರಸ್ತುತವಾಗಿವೆ ಎಂಬುದನ್ನು ತಿಳಿಯಲು ದಾಸೋಹದ ತತ್ವವನ್ನು ಕುರಿತು ಬಹುತೇಕ ಎಲ್ಲ ಶರಣರ ವಚನಗಳಿಂದ ತಿಳಿದು ಬರುತ್ತದೆ.

**"ಕಾಯಕವಳಿದ ಶಾವಿನಲ್ಲಿ ಜೀವದ ಎಡೆಯಾಟ ಉಂಟೆ?**

**ಭಾವವಿಲ್ಲದ ಭಕ್ತಿ ಹೊಯಿತ್ತು**

**ಮಾರಯ್ಯಪ್ರಿಯ ಅಮಲೇಶ್ವರ ಲಿಂಗವ ಮುಟ್ಟದೆ"[1]**

ಈ ವಚನ ಶಿವಶರಣೆ ಆಯ್ದಕ್ಕಿ ಲಕ್ಕಮ್ಮ ಅವರದು ಈ ವಚನದಲ್ಲಿ ದಾಹೋಹದ ವಿವರಣೆಯು ಎಳೆ ಎಳೆಯಾಗಿ ಜನ ಸಾಮಾನ್ಯರಿಗೆ ತಿಳಿಯುವಂತೆ ರಚಿಸಿದ್ದಾರೆ. ಕಾಯಕ ಇಲ್ಲದೆ ಜೀವನಕ್ಕೆ ಅರ್ಥವಿಲ್ಲ. ದಾಸೋಹ ಮತ್ತು ಕಾಯಕ ಎಲ್ಲಿ ಇರತ್ತವೆಯೋ ಅಲ್ಲಿ ಸೃಷ್ಟಿಕರ್ತನ ಕೃಪೆ ಇದ್ದೆ ಇರುತ್ತದೆ. ಸ್ನೇಹಪರ ಸಂತೋಷದ ಜೀವನ ನಮ್ಮದಾಗಬೇಕಾದರೆ ಕಾಯಕ ಜೀವನ ಹೇಗೆ ನಡೆಸಬೇಕು ಎಂಬುದನ್ನು ಬಸವಣ್ಣನವರು ಕಾಯಕ ಕುರಿತು ವಚನ ಒಂದರಲ್ಲಿ ನೋಡಬಹುದು.

**"ಕೃಷಿ ಕೃತ್ಯ ಕಾಯಕದಿಂದಾದರೇನು?**
**ತನುನ ಬಳಲಿಸಿ ತಂದು ದಾಸೋಹವ ಮಾಡುವ**
**ಪರಮ ಸದ್ಭಕ್ತನ ಪಾದವ ತೋರಯ್ಯಾ ಎನಗೆ**
**ಆದೆಂತೆನಃ ಆತನ ತನುಶುದ್ಧ ಆತನ ಮನಶುದ್ಧ**
**ಆತನ ನಡೆ ಶುದ್ಧ ನುಡಿಯೆಲ್ಲ ಪಾವನವು**
**ಆತಂಗೆ ಉಪದೇಶವ ಮಾಡಿದಾತನ ಪರಮ ಸದ್ಗುರು**
**ಅಂತಪ್ಪ ಸದ್ಭಕ್ತನ ಮನೆಯ ಕೈಲಾಸವೆಂದು ಹೊಕ್ಕು**
**ಲಿಂಗಾರ್ಚನೆಯ ಮಾಡುವ ಜಂಗಮವೇ ಜಗತ್ಪಾವನ**
**ಇಂತಪ್ಪವರ ನಾನು ನೇರೆನಂಬಿ**
**ನಮೋನಮಃ ಎಂದನೆಯ್ಯಾ ಕೂಡಲಸಂಗಮದೇವಾ"[2]**

ವಚನಕಾರರು ದುಡಿಮೆಯನ್ನು ಹೀಗೆ ಪ್ರಶಿಕ್ಷಿಸಿದರ ಪರಿಣಾಮವಾಗಿ ಶರಣ ಸಮಾಜದಲ್ಲಿ ಕಾಯಕಕಷ್ಟದ ದುಡಿಮೆಗಾರರಲ್ಲಿ ನೈತಿಕ ಧೈರ್ಯ ಹಾಗೂ ಆತ್ಮಬಲ ಬೆಳೆಯಿತು. ನೂಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ಮೊಳಗೆಯ ಮಾರಯ್ಯ ಮೊದಲಾದ ಶರಣರ ಚರಿತ್ರೆಯಲ್ಲಿ ಇದನ್ನು ಕಾಣುತ್ತೇವೆ. ಅವರೆಲ್ಲ ಸದಾಚಾರಕ್ಕೆ ತಲೆಬಾಗಿದರೇ ಹೊರತು ಶ್ರೀಮಂತಿಕೆಗೆ ತಲೆಬಾಗಲಿಲ್ಲ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಕಾಯಕ ಮಾಡಲೇಬೇಕು ಕಾಯಕದಿಂದಲೇ ಜೀವನ ಶುದ್ಧಿಯಾಗುವದು ಎಂಬುದನ್ನು ಜನತೆಗೆ ತೋರಿಸಿಕೊಟ್ಟರು.

**"ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ**
**ಲಿಂಗವಾದರೂ ಕಾಯಕದಿಂದಲೇ ಶಿಲೆಯಕುಲ ಹರಿವುದು**
**ಜಂಗಮವಾದರೂ ಕಾಯಕದಿಂದಲೇ ವೇಷದ ಪಾಶ ಹರಿಯುವದು**
**ಇದು ಚನ್ನಬಸವಣ್ಣ ಪ್ರೀಯ ಚಂದೇಶ್ವರಲಿಂಗದ ಅರಿವು"[3]**

ಕೈಕೊಂಡ ಕಾಯಕ ಹೀನವಾಗಿರಕೂಡದು ಕಾಯಕ ಮಾಡುತ್ತೇನೆಂದು ಭೀಕ್ಷೆ ಬೇಡಿದರೆ? ಕಾಯಕ ಮಾಡಿದಂತಲ್ಲ. ಕಾಯಕ ಮಾಡುವ ಭಕ್ತನ ಆಯ ಸ್ವಂತ ಬೇವರಿನ ಫಲವಾಗಿರಬೇಕು. "ಓಡುವಾತ ಲೆಂಕನಲ್ಲ ಬೇಡುವಾತ ಭಕ್ತನಲ್ಲ! ಎರಡಿಲ್ಲದ ಮನ ಸಂದಿಲ್ಲದ ನಿಷ್ಠೆ ಅಂತರಂಗದಲ್ಲಿ ನೆಲೆಗೊಂಡಿರುವ ಪರಮ ಚೈತನ್ಯದ ಸ್ವಪ್ರಕಾಶಗಳಿಂದ ಕೂಡಿ ಕಾಯಕ ಮಾಡಬೇಕು ತಾನು ಮಾಡುವ ಕ್ರೀಯೆ ಭಕ್ತಿಯ ಸಾಧನೆ ಆತ್ಮ ಜ್ಞಾನದ ಸಿದ್ಧಿ"[4]

ಕಾಯ ಭೌತಿಕ ಕ್ರೀಯೆಯಲ್ಲಿ ತೊಡಗಿಸಿಕೊಂಡಾಗ ಭಕ್ತನ ಮನಸ್ಸು ದೈವಾನು ಸಂಧಾನದಲ್ಲಿ ಅಥವಾ ಆತ್ಮ ಚಿಂತನೆಯಲ್ಲಿ ತೊಡಗಿದಾಗ ಕಾಯಕದಲ್ಲಿ ಏಕಾಗ್ರತೆಯಲ್ಲಿ ಇರ ಬೇಕಾಗುತ್ತದೆ ಪರಿಶುದ್ಧವಾಗುತ್ತದೆ. ಇಂಥ ಪರಿಶುದ್ಧ ಚಿತ್ತದಿಂದ ಮಾಡುವ ಕಾಯಕ ಲಿಂಗಪೂಜೆಯು ನಿಜ ಜಂಗಮ ಪೂಜೆಯು ನಿಜ ಆದುದರಿಂದ

**"ಕಾಯಕದಲ್ಲಿ ನಿರತನಾದಡೆ ಗುರುದರುಶನವಾದರೂ ಮರೆಯಬೇಕು**

**ಲಿಂಗಪೂಜೆಯಾದರೂ ಮರೆಯಬೇಕು**

**ಜಂಗಮ ಮುಂದಿದ್ದಡೆಯೂ ಹಂಗು ಹರಿಯಬೇಕು**

**ಕಾಯಕವೇ ಕೈಲಾಸವಾದ ಕಾರಣ**

**ಅಮರೇಶ್ವರ ಲಿಂಗವಾಯಿತ್ತಾದರೂ ಕಾಯದೊಳಗು"**[5]

ಕಾಯಕದಲ್ಲಿ ನಿರತನಾದಾಗ ಅದನ್ನು ಶ್ರಮವಹಿಸಿ ಮನಮೆಚ್ಚಿ ಮಾಡಬೇಕು. ಗುರು ಬಂದಿದ್ದಾನೆ ಜಂಗಮ ಬಂದಿದ್ದಾನೆ ಎಂದು ನೆಪವನ್ನು ಹೇಳಿ ಕಾಯಕದಿಂದ ದೂರ ಸರಿಯುವದು ಕಾಯಕಕ್ಕೆ ಮಾಡಿದ ವಂಚನೆಯಾಗುತ್ತದೆ. ಸತ್ಯ ಶುದ್ಧ ಕಾಯಕದಲ್ಲಿ ಮನಸ್ಸು ಕೇಂದ್ರಿಕೃತವಾಗಿರಬೇಕು.

ಕಾಯಕದಲ್ಲಿ ನಿರತನಾದ ವ್ಯಕ್ತಿಯ ಅಂತರಂಗ ಶುದ್ಧಿಗೆ ಸಂಬಂಧಿಸಿದ ವಿಚಾರಗಳು ಎಷ್ಟು ಮೌಲಿಕವಾದವು ಎಂಬುದನ್ನು ನೂಲಿಯ ಚಂದಯ್ಯನ ಈ ವಚನ ಎತ್ತಿ ತೋರಿಸುತ್ತದೆ.

**"ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತವಿಚ್ಛಂದವಾಗದಿರಬೇಕು**

**ನೇಮದ ಕೂಲಿಯಂದಿನ ನಿತ್ಯ ನೇಮದಲ್ಲಿ ಸಂದಿರಬೇಕು**

**ನೇಮದ ಕೂಲಿಯ ಬಿಟ್ಟು ಹೇಮದಾಸಗೆ ಕಾಯಿಸಿ ದ್ರವ್ಯದನ ಹಿಡಿದರೆ**

**ತಾ ಮಾಡುವ ಸೇವೆ ನಷ್ಟವಯ್ಯ"**[6]

ದುಡಿಮೆ ಸತ್ಯಯುತವಾಗಿರಬೇಕು ಶುದ್ಧವಾಗಿರಬೇಕು. ಚಿತ್ತ ಚಾಂಚಲ್ಯದಿಂದ ಕೂಡಿರಬಾರದು ನಿತ್ಯವು ಕಾಯಕ ಮಾಡುತ್ತಿರಬೇಕು. ಹೇಮದಾಸಗೆ ಉದ್ಯೋಗ ಕೈಗೊಂಡಿರಬಾರದು. ಸಂಗ್ರಹ ಮಾಡುವ ಮನೋಧರ್ಮ ಹೊಂದಿರಬಾರದು ಸಂಪಾದನೆ ಮಾಡಿದ ದ್ರವ್ಯಗಳು ತ್ರಿವಿಧ ದಾಸೋಹಕ್ಕೆ ವಿನಿಯೋಗಿಸಬೇಕು ಶರಣ ಸಮಾಜದ ಸೇವೆಗಾಗಿ ಮುಡಪಾಗಿಸಬೇಕು. ಇಂತಹ ಕಾಯಕ ಭೂಮಿಯಲ್ಲಿಯು ಸರ್ವ ಬಂಧನದಿಂದ ಮುಕ್ತರಾದ ದೇವಮಾನವರಾಗುತ್ತಾರೆ ಎನ್ನುವದು ಶರಣ ಅನುಭವ ಪೂರ್ಣ ಸಿದ್ಧಾಂತ.

"ಸೋಹಂ" ಎಂದೆನಿಸದೇ 'ದಾಸೋಹಂ' ಎಂದೆನಿಸಯ್ಯಾ ಎಂಬ ಬಸವ ವಾಣಿಯಂತೆ ನಾವೆಲ್ಲರೂ ಪರಿಪಾಲಿಸುವದು ಸೂಕ್ತ ಕೇವಲ ತೋರಿಕೆಗಾಗಿ ದಾಸೋಹ ಸೇವೆ ಮಾಡದೇ ಅಂತರಂಗದ ಅರವಿನಲ್ಲಿ ದಾಸೋಹ ಮಾಡುವ ಮೂಲಕ ಹಸಿದು ಬಂದವರಿಗೆ ತೃಪ್ತಿ ಪಡಿಸುವ ಕೆಲಸವು ನಿರಂತರವಾಗಿ ನಡೆಯಬೇಕು. ಶರಣರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುವ ಮೂಲಕ ಸಮಾಜದ ಒಳಿತಿಗಾಗಿ ಶ್ರಮವಹಿಸಿ ಕಾಯಕ ಮಾಡುತ್ತ ಕಾಯಕದಲ್ಲಿ ಬರುವ ಸ್ವಲ್ಪ ಹಣವಾದರೂ ದಾಸೋಹ ಮಾಡುತ್ತ ಜೀವನ ಮುಕ್ತಿಯನ್ನು ಪಡೆಯೋಣ.

**ಕೊನೆ ಟಿಪ್ಪಣಿಗಳು**


- ಬಸವರಾಜು. ಎಲ್. (2004). ಶಿವಗಣ ಪ್ರಸಾದಿ. ಪ್ರಭುದೇವರ ಶೂನ್ಯ ಸಂಪಾದನೆ. ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘ, ಗುಲ್ಬರ್ಗ. ಪು.ಸಂ.324.
- ಹೆಂಡಿ. ಬಿ. ಬಿ. (2003). ಬಸವೇಶ್ವರ. ಬಸವೇಶ್ವರ ಪೀಠ, ಡಾ.ಆರ್.ಸಿ.ಹೀರೆಮಠ್, ಕನ್ನಢ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ. ಪು.ಸಂ.70.
- ಕಲಬುರ್ಗಿ. ಎಂ. ಎಂ. (2003). ಶಿವಶರಣರ ಕಾಯಕ ಸಿದ್ಧಾಂತ. ಬಸವೇಶ್ವರ ಪೀಠ, ಡಾ.ಆರ್.ಸಿ. ಹೀರೆಮಠ್, ಕನ್ನಢ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ. ಪು.ಸಂ.53.
- ಕಲಬುರ್ಗಿ. ಎಂ. ಎಂ. (2003). ಶಿವಶರಣರ ಕಾಯಕ ಸಿದ್ಧಾಂತ. ಬಸವೇಶ್ವರ ಪೀಠ, ಡಾ.ಆರ್.ಸಿ. ಹೀರೆಮಠ್, ಕನ್ನಢ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ. ಪು.ಸಂ.53.
- ಬಸವರಾಜು. ಎಲ್. (2004). ಶಿವಗಣ ಪ್ರಸಾದಿ. ಪ್ರಭುದೇವರ ಶೂನ್ಯ ಸಂಪಾದನೆ. ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘ, ಗುಲ್ಬರ್ಗ. ಪು.ಸಂ.321.
- ತಿಪ್ಪೇರುದ್ರಸ್ವಾಮಿ. ಎಚ್. (1988). ಶೂನ್ಯ ಸಂಪಾದನೆ ವಿವರನಾತ್ಮಕ ಪರಿಚಯ. ಡಿ.ವಿ.ಕೆ.ಮೂರ್ತಿ ಪ್ರಕಾಶನ, ಗುಲ್ಬರ್ಗ. ಪು.ಸಂ.124.